**ಪ್ರಧಾನ ದಿವಾಣಿ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ**
**ಹುಬ್ಬಳ್ಳಿ**
**ಸಿ.ಸಿ.ನಂ.22/2022**

ಫಿರ್ಯಾದಿ ಃ ಸರ್ಕಾರದ ಪರವಾಗಿ, ಪೂರ್ವ ಸಂಚಾರ ಪೋಲಿಸ ಠಾಣೆ, ಹುಬ್ಬಳ್ಳಿ

**– ವಿರುದ್ಧ–**

ಆರೋಪಿ ನಂ.1ಃ ಮೆಹಬೂಬಸಾಹೇಬ ಫಯಾಜ ಅಹ್ಮದ ನಾಗನೂರ,
ವಯಸುಃ 22, ಸಾಃ ಹುಬ್ಬಳ್ಳಿ.

**ದಂಡ ಪ್ರಕ್ರಿಯಾ ಸಂಹಿತೆ ವಿಧಿ 313ರ ಅಡಿ ದಾಖಲಿಸಿದ ಆರೋಪಿತನ ಹೇಳಿಕೆ.**

**ಪ್ರ 1** : ಅಭಿಯೋಜನಾ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉ :

**ಪ್ರ 2** : ಪ್ರಾಸಾ–1 ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ಶೇಷಂ ಮ್ಯಾಥೂ ಪರಿಚಯ, 2021, 9 ನೇ ತಿಂಗಳು ಒಂದು ದಿನ ಹುಬ್ಬಳ್ಳಿ–ಗದಗ ರೋಡಿನ ಅಂಡರ ಬ್ರಿಡ್ಜ ಬಳಿ ಹೋಗಿ ನೋಡಿದಾಗ ಶೇಷಂ ಮ್ಯಾಥೂ ರವರ ಎಡಗಾಲಿಗೆ ತೀವ್ರ ಗಾಯವಾಗಿತ್ತು, ಪೋಲಿಸರು ಅವರನ್ನು ಕಿಮ್ಸ ರವಾನಿಸಿದರು, ವಿಚಾರಣೆ ಮಾಡಿದಾಗ ಒಂದು ಟಿಪ್ಪರ ಗಾಡಿ ಹಿಂದಿನಿಂದ ಬಂದು ಡಿಕ್ಕಿಪಡಿಸಿದ ಬಗ್ಗೆ ಗೊತ್ತಾಯಿತು, ಆತನ ಹೆಸರು ಮೆಹಬೂಬ ನಾಗನೂರ ಎಂದು ಗೊತ್ತಾಗಿ, ನಿಪಿ.1 ರಂತೆ ಪೋಲಿಸ ಠಾಣೆಗೆ ಹೋಗಿ ದೂರು ನೀಡಿದ ಬಗ್ಗೆ, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರ್ತಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉ ಃ

ಪ್ರ **3** ಃ ಪ್ರಾಸಾ–2 ಮತ್ತು 3 ಇವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 4 ವರ್ಷಗಳ ಹಿಂದೆ 9 ನೇ ತಿಂಗಳು 28 ನೇ ತಾರೀಖ ರೇಲ್ವೆ ಅಂಡರ ಬ್ರಿಡ್ಜ ಬಳಿ ಚಾಸಾ–1 ಇವರು ಇವರನ್ನು ಕರೆದು ನಿಪಿ.3 ರಂತೆ ಸ್ಥಳ ಪಂಚನಾಮೆ ಮಾಡಿ ನಿಪಿ.4 ಮತ್ತು 5 ರಂತೆ ಫೋಟೊ ತೆಗೆದ ಬಗ್ಗೆ ನಿಪಿ.6 ರಂತೆ ವಾಹನ ಅಮಾನತ್ತು ಪಂಚನಾಮೆ ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉಃ

**ಪ್ರ 4 :** ಪ್ರಾಸಾ–4 ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 28.09.2021 ರಂದು ರೇಲ್ವೆ ನಿಲ್ದಾಣ ಬ್ರಿಡ್ಜ್ ಬಳಿ ಇರುವಾಗ ಮ್ಯಾಥೂ ಹಾಗೂ ಆತನ ಮಗ ಜೈಸನ ಇವರು ಬೈಕಿನಲ್ಲಿ ಬರುತ್ತಿದ್ದಾಗ ಹಿಂದಿನಿಂದ ಟಿಪ್ಪರ ಲಾರಿ ವೇಗವಾಗಿ ಬಂದು ಡಿಕ್ಕಿಪಡಿಸಿದ ಬಗ್ಗೆ, ಮ್ಯಾಥೂ ಕಾಲು ಮುರಿದ ಬಗ್ಗೆ ಮಗುವಿನ ಹೊಟ್ಟೆಗೆ ಗಾಯವಾದ ಬಗ್ಗೆ, ಚಾಲಕನ ಹೆಸರು ಮಹಮ್ಮದ ಎಂಬ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉಃ

**ಪ್ರ 5 :** ಪ್ರಾಸಾ–7 ಇವರು ತಮ್ಮ ಸಾಕ್ಷ್ಯದಲ್ಲಿ 2021 ರಲ್ಲಿ ಒಂದು ದಿನ ಮಧ್ಯಾಹ್ನ ರೇಲ್ವೆ ಅಂಡರ ಬ್ರಿಡ್ಜ್ ಮ್ಯಾಥೂ ಹಾಗೂ ಆತನ ಮಗ ಜೈಸನ ಇವರು ಬೈಕಿನಲ್ಲಿ ಬರುತ್ತಿದ್ದಾಗ ಹಿಂದಿನಿಂದ ಟಿಪ್ಪರ ಲಾರಿ ವೇಗವಾಗಿ ಬಂದು ಡಿಕ್ಕಿಪಡಿಸಿದ ಬಗ್ಗೆ, ಮ್ಯಾಥೂ ಕಾಲಿನ ಮೇಲೆ ಟಿಪ್ಪರ ಲಾರಿ ಚಕ್ರ ಹರಿದು ರಕ್ತ ಗಾಯವಾಗಿತ್ತು, ತಲೆಗೆ ಹಾಗೂ ಬೆನ್ನು ಮೂಳೆಗೆ ಗಾಯಗಳಾಗಿದ್ದವು, ಮಗುವಿಗೆ ಸಣ್ಣ ಪುಟ್ಟ ಪೆಟ್ಟಾಗಿತ್ತು. ಪೋಲಿಸರ ಮುಂದೆ ಹೇಳಿಕೆ ನೀಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉಃ

**ಪ್ರ 6 :** ಪ್ರಾಸಾ–8 ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 28.09.2021 ರಂದು ರೇಲ್ವೆ ಅಂಡರ ಬ್ರಿಡ್ಜ್ ಬಳಿ ಇವರನ್ನು ಕರ್ತವ್ಯದಲ್ಲಿದ್ದಾಗ ಒಂದು ಲಾಗಿ ನಂ.ಕೆಎ–25/ಎಎ–3504 ನೇದ್ದರ ಚಾಲಕ ವೇಗವಾಗಿ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ಒಂದು ಬೈಕ ನಂ.ಕೆಎ–25/ಇ.ಎಲ್.–1788 ನೇದ್ದರ ಬಲಗಡೆ ಭಾಗಕ್ಕೆ ಡಿಕ್ಕಿಪಡಿಸಿ ಅವರ ಕಾಲಿಗೆ ತಲೆಗೆ ಪೆಟ್ಟಾಗುವಂತೆ ಮಾಡಿದ ಬಗ್ಗೆ, ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉಃ

**ಪ್ರ 7 :** ಪ್ರಾಸಾ–9 ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 28.09.2021 ರಂದು ರೇಲ್ವೆ ಅಂಡರ ಬ್ರಿಡ್ಜ್ ಬಳಿ ಅಪಘಾತವಾಗಿದೆ ಗಾಯಾಳುವನ್ನು ಸ್ಥಳಾಂತರಿಸುವಂತೆ ಸೂಚನೆ ನೀಡಿದ ಮೇರೆಗೆ ಅಟೋದಲ್ಲಿ ಗಾಯಾಳುವನ್ನು ಕಿಮ್ಸ ಆಸ್ಪತ್ರೆಗೆ ರವಾನಿಸಿದ ಬಗ್ಗೆ,

ಅಪಘಾತದ ಬಗ್ಗೆ ವಿಚಾರಿಸಿದಾಗ ಒಂದು ಹಳದಿ ಕಲರ ಟಿಪ್ಪರ ವಾಹನ ಅತೀ ವೇಗ ಹಾಗೂ ನಿರ್ಲಕ್ಷತನದಿಂದ ಬಂದು ಮೋಟಾರ ಸೈಕಲ ಹಿಂಬದಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ ಬಗ್ಗೆ, ಗಾಯಾಳುವಿನ ಹೆಸರು ಮ್ಯಾಥೂ ಅಂತಾ ಹೇಳಿದ ಬಗ್ಗೆ, ಟಿಪ್ಪರ ಚಾಲಕನ ಹೆಸರು ಮಹಮ್ಮದ ಯೂನೂಸ ಜಹಾಂಗೀರಸಾಬ ಅನ್ಸಾರಿ ಅಂತಾ, ಮಾಥೂ ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿದ ಬಗ್ಗೆ, ಮರು ಹೇಳಿಕೆ ನೀಡಿದ ಬಗ್ಗೆ, ನಿಪಿ.3 ರಂತೆ ಸ್ಥಳ ಪಂಚನಾಮೆ ಮಾಡಿದ ನಿಪಿ.4 ಮತ್ತು 5 ರಂತೆ ಫೋಟೊ ತೆಗೆದ ಬಗ್ಗೆ, ನಿಪಿ.8 ರಂತೆ ಶವ ತನಿಖೆ ಮಾಡಿದ ಬಗ್ಗೆ, ನಿಪಿ.6 ರಂತೆ ವಾಹನ ಜಪ್ತು ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉಃ

**ಪ್ರ 8 :** ಪ್ರಾಸಾ–11 ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 28.09.2021 ರಂದು ಚಾಸಾ–1 ಕೊಟ್ಟ ದೂರನ್ನು ಸ್ವೀಕಾರ ಮಾಡಿ ಗುನ್ನಾ ನಂ.41/2021 ರಲ್ಲಿ ದಾಖಲ ಮಾಡಿಕೊಂಡು ನಿಪಿ.21 ರಂತೆ ಪ್ರವವ ವನ್ನು ನ್ಯಾಯಾಲಯಕ್ಕೆ ಕಳುಹಿಸಿ, ಚಾಸಾ–2 ಮತ್ತು 3 ಸಮಕ್ಷಮ ನಿಪಿ.3 ರಂತೆ ಸ್ಥಳ ಪಂಚನಾಮೆ ಮಾಡಿ, ನಿಪಿ.4 ಮತ್ತು 5 ರಂತೆ ಪೋಟೋ ತೆಗೆದು ಚಾಸಾ–9 ರಿಂದ 12 ಇವರ ಹೇಳಿಕೆ ಪಡೆದುಕೊಂಡ ಬಗ್ಗೆ, ಚಾಸಾ–4 ಮತ್ತು 5 ಇವರ ಸಮಕ್ಷಮ ನಿಪಿ.8 ರಂತೆ ಶವ ಪಂಚನಾಮೆ ಮಾಡಿ ಮೃತ ದೇಹವನ್ನು ಹಸ್ತಾಂತರ ಮಾಡಿ ಪಂಚರ ಸಮಕ್ಷಮ ನಿಪಿ.6 ರಂತೆ ವಾಹನ ಜಪ್ತು ಪಂಚನಾಮೆ ಮಾಡಿದ ಪ್ರಕರಣದ ಆರೋಪಿಯನ್ನು ದಸ್ತಗೀರ ಮಾಡಿ ಹೇಳಿಕೆ ಪಡೆದುಕೊಂಡು, ಆರೋಪಿತನ ಕಡೆಯಿಂದ ನಿಪಿ.23 ರಂತೆ ವ್ಯಾಸಂಗ ಪ್ರಮಾಣ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡು, ವಾಹನ ಮಾಲೀಕರು ಹಾಜರು ಪಡಿಸಿದ ದಾಖಲೆಗಳನ್ನು ಸ್ವೀಕಾರ ಮಾಡಿ, ಪ್ರಕರಣವು ಘೋರ ಸ್ವರೂಪದ್ದಾಗಿದ್ದರಿಂದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–22 ಇವರಿಗೆ ವಹಿಸಿಕೊಟ್ಟ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉಃ

**ಪ್ರ 9 :** ಪ್ರಾಸಾ–12 ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 04.10.2021 ರಂದು ಚಾಸಾ–21 ಇವರಿಂದ ಸ್ವೀಕಾರ ಮಾಡಿ ದಿಃ 05.10.2021 ರಂದು ಚಾಸಾ–16 ರವರು ಮೃತನ

ವಿಶ್ರಾವನ್ನು ತಂದು ಹಾಜರುಪಡಿಸಿದ್ದರಿಂದ ಚಾಸಾ–4 ಮತ್ತು 5 ಇವರ ಸಮಕ್ಷಮ ನಿಪಿ.9 ರಂತೆ ಪಂಚನಾಮೆ ಮಾಡಿ, ವಿಶ್ರಾ ಬಾಟಲಿಗಳನ್ನ್ ಆರ್.ಎಫ್.ಎಸ್.ಎಲ್. ಗೆ ಕಳಹಿಸಿ, ಬೈಕ ದಾಖಲೆಗಳನ್ನು ಸ್ವೀಕಾರ ಮಾಡಿ ನಿಪಿ.26 ರಂತೆ ಇಂಡಮ್ನಿಟಿ ಬಾಂಡ ಪಡೆದು ವಾಹನ ಬಿಡುಗಡೆ ಮಾಡಿ, ದಿಃ 12.10.2021 ರಂದು ಚಾಸಾ–20 ಇವರಿಂದ ನಿಪಿ.19 ರಂತೆ ವಾಹನ ಯಾಂತ್ರಿಕ ವರದಿ ಪಡೆದು, ಚಾಸಾ–17 ಇವರಿಂದ ಮಾಸ್ಟರ ಜೈಸನ ಇವರ ನಿಪಿ.14 ರಂತೆ ಗಾಯದ ಪ್ರಮಾಣ ಪತ್ರ ಪಡೆದು, ಲಾರಿಯನ್ನು ಚಾಸಾ–6 ಮತ್ತು 7 ಇವರ ಸಮಕ್ಷಮ ನಿಪಿ.13 ರಂತೆ ಪಂಚನಾಮೆ ಮಾಡಿ, ನಿಪಿ.16 ರಂತೆ ಆರ್.ಎಫ್.ಎಸ್.ಎಲ್.ವರದಿ ವರದಿ ಪಡೆದು, ಚಾಸಾ–18 ಇವರಿಂದ ನಿಪಿ.17 ರಂತೆ ಪಿ.ಎಂ. ವರದಿ ಪಡೆದುಕೊಂಡು, ಸಾಕಷ್ಟು ಸಾಕ್ಷಾಧಾರಗಳು ಇರುವುದರಿಂದ ಅವರ ವಿರುದ್ದ, ಅಂತಮ ವರದಿ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉಃ

**ಪ್ರ 10:** ಈ ಮೊಕದ್ದಮೆ ಬಗ್ಗೆ ನಿಮಗೇನಾದರೂ ಹೇಳುವುದು ಇದೆಯೇ ?

**ಉ :**

**ಪ್ರ 11 :** ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉ :

(ಮೇಲಿನ ಎಲ್ಲ ಪ್ರಶ್ನೆಗಳನ್ನು ಆರೋಪಿತನಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿತನು ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದು, ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ಧೃಡೀಕರಿಸುತ್ತೇನೆ )

ದಿನಾಂಕ : 05–03–2026

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ಹಾಗೂ ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಬ್ಬಳ್ಳಿ.

1 ನೇ ಆರೋಪಿಯ ಸಹಿ